ದಿನಾಂಕ 30.07.2025 ರಂದು ಸಾಕ್ಷಿಗೆ ಪ್ರಮಾಣೀಕರಿಸಲಾಯಿತು.

**ಪಾಟಿ ಸವಾಲು 3 ರಿಂದ 6 ನೇ ಪ್ರತಿವಾದಿ ಪರ ಶ್ರೀ ಎಂ.ಟಿ.ಆರ್. ವಕೀಲರಿಂದಃ-**

1. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಹೇಳಿರುವ ವಿಚಾರಗಳು ಗೊತ್ತು. ನನ್ನ ಮುಖ್ಯವಿಚಾರಣೆ ಪ್ರಮಾಣಪತ್ರಕ್ಕೆ ವಕೀಲರು ಮಾಹಿತಿಯನ್ನು ನೀಡಿರುತ್ತಾರೆ. ದಾವಾ ಶೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿ ಈ ಹಿಂದೆ ದೊಡ್ಡಪ್ಪ ಎನ್ನುವವರು ಸಹಾ ದಾವೆಯನ್ನು ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ದೊಡ್ಡಪ್ಪ ಎನ್ನುವವರು ನಮ್ಮ ಊರಿನವರು ಎಂದರೆ ಸರಿ. ಅವರು ನನ್ನ ಪರಿಚಯಸ್ಥರು ಆದರೆ ನನ್ನ ಸಂಬಂಧಿಕರಲ್ಲ. ಸರದರಿಯವರು ಇದೇ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 270/19 ನ್ನು ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ . ಸದರಿಯವರು ಸದರಿ ದಾವೆಯನ್ನು ಹಿಂಪಡೆದು ಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

2. ದಾವಾ ಶೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿ ದೊಡ್ಡಪ್ಪ ಮತ್ತು 3 ರಿಂದ 6 ನೇ ಪ್ರತಿವಾದಿಗಳಿಗೆ ತಕರಾರು ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯವರು ದಾವಾ ಸ್ವತ್ತನ್ನು ಗುಡ್ಡಪ್ಪ ಬಿನ್ ಮಲ್ಲಪ್ಪ ಎರೇಕಟ್ಟಿರವರಿಂದ ದಿನಾಂಕ 14.03.1972 ರ ನೋಂದಾಯಿತ ಕ್ರಯಪತ್ರದ ಪ್ರಕಾರ ಖರೀದಿಸಿರುತ್ತಾರೆ. ಆಗ ನನಗೆ ಸುಮಾರು 8 ರಿಂದ 9 ವರುಷ ವಯಸ್ಸಾಗಿರಬಹುದು. ಸದರಿ ಸಮಯದಲ್ಲಿ ಖರೀದಿ ವಿಚಾರ ನನಗೆ ಗೊತ್ತಾಗಿರುವುದಿಲ್ಲ. ನನ್ನ ತಂದೆ ಮರಣಾನಂತರ ನನಗೆ ದಾವಾ ಆಸ್ತಿಯನ್ನು ಖರೀದಿಸಿರುವ ವಿಚಾರ ನನ್ನ ಗಮನಕ್ಕೆ ಬಂದಿರುತ್ತದೆ. ನಮ್ಮ ತಂದೆಯವರು ದಾವಾ ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ದಾವಾ ಆಸ್ತಿಯ ಖಾತೆ ಮತ್ತು ಪಹಣಿಗಳು ಗುಡ್ಡಪ್ಪರವರ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಗುಡ್ಡಪ್ಪರವರಿಗೆ ದಾವಾ ಆಸ್ತಿಯು ಬಿ.ಆರ್. ನಂ 4/79-80 ರ ಮ್ಯುಟೇಷನ್ ದಾಖಲೆ ಪ್ರಕಾರ ಬಂದಿರುತ್ತದೆ ಎಂದರೆ ಸರಿಯಲ್ಲ.

3. ಗುಡ್ಡಪ್ಪರವರಿಗೆ ದಾವಾ ಆಸ್ತಿಯು ಸದರಿಯವರ ತಂದೆ ಮಲ್ಲಪ್ಪರವರಿಂದ ಬಂದಿರುತ್ತದೆ.ಮಲ್ಲಪ್ಪರವರಿಗೆ ಎಷ್ಟು ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಗುಡ್ಡಪ್ಪ ಎನ್ನುವವರು ಒಬ್ಬರೇ ಮಗ ಎಂದು ನುಡಿಯುತ್ತಾರೆ.

This is a True Copy of the Court Records Online. Authenticated @ districts.ecourtsindia.com/cnr/KASM500024762015/truecopy/order-2.pdf

ಮಲ್ಲಪ್ಪರವರಿಗೆ ಗುಡ್ಡಪ್ಪ ಎನ್ನುವ ಮಗ ಮತ್ತು ಗಿಡ್ಡಮ್ಮ ಎನ್ನುವ ಮಗಳು ಇದ್ದಳು ಎಂದರೆ ನನಗೆ ಗೊತ್ತಿಲ್ಲ. ಸದರಿ ಗುಡ್ಡಪ್ಪರವರು ತನ್ನ ಅಕ್ಕ ಗಿಡ್ಡಮ್ಮನ ಮಗಳಾದ ಶಾಂತಮ್ಮಳನ್ನು ವಿವಾಹ ಆಗಿರುತ್ತಾಳೆ ಎಂದರೆ ಸರಿ. ಗುಡ್ಡಪ್ಪರವರು ನನಗೆ ಬರೆದುಕೊಟ್ಟ ಕ್ರಯಪತ್ರದಲ್ಲಿ ಗಿಡ್ಡಮ್ಮರವರದ್ದಾಗಲೀ , ಶಾಂತಮ್ಮರವರದ್ದಾಗಲೀ ಸಹಿ ಇರಲಿಲ್ಲ ಎಂದರೆ ಸರಿ. 1972 ರ ಸಮಯದಲ್ಲಿ ಗುಡ್ಡಪ್ಪರವರಿಗೆ ಉಜಿನಪ್ಪ , ಮೈಲಾರಪ್ಪ , ಮಲ್ಲಮ್ಮ ಮತ್ತು ಗಂಗಮಾಳಮ್ಮ , ಜಯಮ್ಮ ಎನ್ನುವ ಮಕ್ಕಳು ಇದ್ದರು ಎಂದರೆ ಸರಿ. ಸದರಿಯವರು 1972 ರ ಸಮಯದಲ್ಲಿ ಪ್ರಾಪ್ತ ವಯಸ್ಕರಾಗಿದ್ದರು ಎಂದರೆ ಸರಿ. ಕ್ರಯಪತ್ರಕ್ಕೆ ಸದರಿಯವರ ಸಹಿಯನ್ನು ಪಡೆದುಕೊಂಡಿಲ್ಲ ಎಂದರೆ ಸರಿ.

4. 1972 ರಲ್ಲಿ ಕ್ರಯಪತ್ರದಂತೆ ದಾವಾ ಆಸ್ತಿಯ ಖಾತೆ ಮತ್ತು ಪಹಣಿಯನ್ನು ಬದಲಾಯಿಸಲು ತಾಲ್ಲೂಕ ಕಚೇರಿಗೆ ಅರ್ಜಿ ನೀಡಿರುತ್ತೀರಾ ಎಂದರೆ ಸಾಕ್ಷಿಯು ಸದರಿ ಸಮಯದಲ್ಲಿ ಅರ್ಜಿ ನೀಡಿರಬಹುದು ಆದರೆ ತುಂಡು ಭೂಮಿ ಆಗಿದ್ದರಿಂದ ಖಾತೆ ಪಹಣಿ ಆಗಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ತುಂಡು ಭೂಮಿ ಆಗಿದ್ದರೂ 11-ಇ ನಕಾಶೆ ಪಡೆದು ಖಾತೆ ಪಹಣಿ ಬದಲಾಯಿಸಿಕೊಳ್ಳಬಹುದಿತ್ತು ಎಂದರೆ ಸಾಕ್ಷಿಯು ನಮ್ಮ ತಂದೆಯವರು ಆ ರೀತಿ ಬದಲಾಯಿಸಿಕೊಂಡಿಲ್ಲ ಎಂದು ನುಡಿಯುತ್ತಾರೆ. ಗುಡ್ಡಪ್ಪರವರು ನಮ್ಮ ಹೆಸರಿಗೆ ಕ್ರಯಪತ್ರವನ್ನು ಬರೆದುಕೊಟ್ಟಿರುವುದಿಲ್ಲ. ಸಾಕ್ಷಿ ಮುಂದುವರೆದು ನಮ್ಮ ತಂದೆಯವರ ಹೆಸರಿಗೆ ಕ್ರಯಪತ್ರವನ್ನು ಬರೆದುಕೊಟ್ಟಿರುತ್ತಾರೆಂದು ನುಡಿಯುತ್ತಾರೆ.

5. ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ನಾವು ಸ್ವಾಧೀನದಲ್ಲಿ ಇಲ್ಲ ಎಂದರೆ ಸಾಕ್ಷಿಯು ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ಮನೆ ಇದ್ದು ಹಾಲಿ ನಾವು ಅಲ್ಲಿ ವಾಸವಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ 3 ರ 7 ಎಕರೆ 15 ಗುಂಟೆ ಜಮೀನಿನಲ್ಲಿ 3 ರಿಂದ 5 ನೇ ಪ್ರತಿವಾದಿಗಳು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು 3 ರಿಂದ 5 ನೇ ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಉಳುಮೆ ಮಾಡುತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ನಿರ್ಮಿಸಿದ ಮನೆಗೆ ವಿದ್ಯುತ್ ಸಂಪರ್ಕ ಪಡೆದು ಮೀಟರ್ ಅಳವಡಿಸಿರುತ್ತೇವೆ. ನಂತರ ನಾವು ಆ ಮನೆಯಿಂದ ಬಂದ ಮೇಲೆ ವಿದ್ಯುತ್ ಸಂಪರ್ಕ

This is a True Copy of the Court Records Online. Authenticated @ districts.ecourtsindia.com/cnr/KASM500024762015/truecopy/order-2.pdf

ಕಡಿತಗೊಳಿಸಿರುತ್ತೇವೆ. ದಾವಾ ಆಸ್ತಿಯಲ್ಲಿನ ಮನೆಗೆ ಮೀಟರ್ ಅಳವಡಿಸಿರುವ ಬಗ್ಗೆ ನಾನು ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

6. ದಾವಾ ಆಸ್ತಿಯಲ್ಲಿ ನಾವು ಎಂದಿಗೂ ಸ್ವಾಧೀನದಲ್ಲಿ ಇಲ್ಲ ಎಂದರೆ ಸಾಕ್ಷಿಯು ನಾವು ಮೊದಲು ದಾವಾಸ್ತಿಯ ಸ್ವಾಧೀನದಲ್ಲಿದ್ದು ಈಗ ಹಾಲಿ ಕೆಂಚಗೊಂಡನಕೊಪ್ಪ ಗ್ರಾಮದಲ್ಲಿ ವಾಸವಿದ್ದೇವೆ ಎಂದು ನುಡಿಯುತ್ತಾರೆ. ಹಾಲಿ ದಾವಾ ಆಸ್ತಿಯಲ್ಲಿ ಪ್ರತಿವಾದಿಗಳಿಗೆ ಸಂಬಂಧಿಸಿದ ಸರಕುಗಳು ಇವೆ ಎಂದರೆ ಸಾಕ್ಷಿಯು ದಾವಾಸ್ತಿಯಲ್ಲಿ ನಾವೇ ಸ್ವಾಧೀನದಲ್ಲಿದ್ದು ಪ್ರತಿವಾದಿಗಳು ನಮ್ಮ ಸ್ವಾಧೀನಕ್ಕೆ ಅಡ್ಡಿಪಡಿಸಿರುತ್ತಾರೆಂದು ನುಡಿಯುತ್ತಾರೆ. ಗುಡ್ಡಪ್ಪರವರು ಮರಣಹೊಂದಿದ ನಂತರ ಸರ್ವೆ ನಂ 3 ರ 8 ಎಕರೆ 2 ಗುಂಟೆ ಜಮೀನು ಉಜ್ಜನಪ್ಪರವರ ಹೆಸರಿಗೆ ಖಾತೆ ಆಗಿದೆ ಎಂದರೆ ಸರಿ. ಗುಡ್ಡಪ್ಪರವರ ಹೆಸರಿನಿಂದ ಉಜ್ಜನಪ್ಪರವರ ಹೆಸರಿಗೆ ಸರ್ವೆ ನಂ 3 ರ ಆಸ್ತಿಯ ಖಾತೆ ಬದಲಾವಣೆ ಆಗಿರುವ ವಿಚಾರ ನನಗೆ ಗೊತ್ತಿಲ್ಲ . ಸಾಕ್ಷಿಯು ಮುಂದುವರೆದು ಸದರಿ ವಿಚಾರ ಈಗ ನನಗೆ ತಿಳಿದು ಬಂದಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ 3 ರ ಖಾತೆಯು ಗುಡ್ಡಪ್ಪರವರ ಹೆಸರಿನಿಂದ ಉಜ್ಜನಪ್ಪರವರ ಹೆಸರಿಗೆ ಬದಲಾದಾಗ ನಾವು ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ.

7. ದಾವೆಯಲ್ಲಿ ಗುಡ್ಡಪ್ಪರವರ ಎಲ್ಲಾ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಪ್ರತಿವಾದಿಗಳಿಗೆ ನಾವು ನೀಡಿದ ನೋಟೀಸು ಜಾರಿ ಆಗಿಲ್ಲ ಮತ್ತು ಅದಕ್ಕೆ ಸಹಿ ಮಾಡಿಲ್ಲ ಎಂದರೆ ಸಾಕ್ಷಿಯು ನಾವು ನಮ್ಮ ವಕೀಲರ ಮೂಲಕ ಪ್ರತಿವಾದಿಗಳಿಗೆ ನೋಟೀಸು ಜಾರಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. 4 ನೇ ಪ್ರತಿವಾದಿಗೆ ನಾವು ನೀಡಿರುವ ನೋಟೀಸು ಜಾರಿ ಆಗಿರುವುದಿಲ್ಲ. ಆರ್ ಪಿ ಎ ಡಿ ಗೆ ನಾವು 4 ನೇ ಪ್ರತಿವಾದಿಯ ಸಹಿಯನ್ನು ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ತಂದೆಯವರ ಮರಣಾನಂತರ ದಾವಾ ಆಸ್ತಿಯ ಖಾತೆಯು ಗುಡ್ಡಪ್ಪರವರ ಹೆಸರಿನಿಂದ ಉಜ್ಜನಪ್ಪರವರ ಹೆಸರಿಗೆ ಬದಲಾವಣೆ ತಿಳಿದು ಬಂದಾಗ ನಾವು ತಹಶೀಲ್ದಾರ್ ಕಚೇರಿಗೆ ಯಾವುದೇ

This is a True Copy of the Court Records Online. Authenticated @ districts.ecourtsindia.com/cnr/KASM500024762015/truecopy/order-2.pdf

ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ನಾವು ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ.

8. ಗುಡ್ಡಪ್ಪರವರು ಎಂದಿಗೂ ನಮ್ಮ ತಂದೆಯವರಿಗೆ ದಾವಾ ಆಸ್ತಿಯ ಕ್ರಯಪತ್ರವನ್ನು ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಗುಡ್ಡಪ್ಪರವರು ನಮ್ಮ ತಂದೆಗೆ ಬರೆದುಕೊಟ್ಟ ಮೂಲ ಕ್ರಯಪತ್ರವನ್ನು ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರೆದು ಸದರಿ ಕ್ರಯಪತ್ರದ ಅಧಿಕೃತ ದೃಢೀಕೃತ ನಕಲನ್ನು ಹಾಜರುಪಡಿಸಿರುತ್ತೇವೆ ಎಂದು ನುಡಿಯುತ್ತಾರೆ.

( ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಿ ಮುಂದೂಡಲಾಯಿತು).

ಓ.ಹೇ.ಕೇ.ಸರಿಯಿದೆ.

(ತೆ.ನ್ಯಾ.ಸಾ.ಹೇ.ಬೆ.ಮಾಡಲಾಯಿತು).

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಶಿಕಾರಿಪುರ.

This is a True Copy of the Court Records Online. Authenticated @ districts.ecourtsindia.com/cnr/KASM500024762015/truecopy/order-2.pdf